## ಪದಬಂಧ



ಎಡದಿಂದ ಬಲಕ್ಕೆ:

1. ಆಜುಬಾಜಿನ ಎಲ್ಲ ಜನರಿಗೂ ಇಂದು ಎಣ್ಣೆ ಸ್ನಾನ 4
3. ಕಾಳಸಂತೆಯಲ್ಲಿ ಮಾರಾಟವಾದದ್ದು ಈ ಪವಿತ್ರ ಬಿಂದಿಗೆ 3
4. ಅವರ ಕಚೇರಿಯಲ್ಲಿ ನಡೆದ ಘಟನೆ ತುಂಬ ರುಚಿಕರವಾಗಿತ್ತು 3
6. ಮಳೆ ತರಬಹುದಾದ ಅನಾಹುತಗಳನ್ನು ನೆನೆದರೇ ಸಂಕಟವಾಗುತ್ತದೆ 4
7. ವಾಡಿಕೆಯಂತೆ ಯವ ಸಂಪ್ರದಾಯವನ್ನೂ ಬಿಡದ ನಿಷ್ಠಾವಂತ 4
9. ನದಿಯ ಬಳಿ ಪ್ರತಿ ನಿತ್ಯ ಕೈಜೋಡಿಸುವುದು ಸೂರ್ಯನಿಗೇ ತಾನೇ? 4
12. ಅವನು ಕೊಟ್ಟ ಮಾತಿನ ಪ್ರಕಾರವೇ ದೊರಕಿತು ಒಪ್ಪಿಗೆ 4
14. ಕಳ್ಳಕಾಕರ ಜೊತೆ ಓಡಾಡಿದ್ದೇ ಆತನ ದೊಡ್ಡ ದೋಷ 3
15. ಗಾರೆ ಕೆಲಸಕ್ಕೆ ಬಂದವನ ಕೈಯಲ್ಲಿ ಇದೆಂಥ ಹುಲ್ಲು? 3
16. ಮಾರಕವಾಗುವಂತೆ ಇದ್ದದ್ದನ್ನು ತಪ್ಪಿಸಿದವನು ಲಕ್ಷ್ಮೀ ಪತಿ 4

ಮೇಲಿಂದ ಕೆಳಕ್ಕೆ:

1. ಈ ದಾಸವಾಳದ ಸೌಂದರ್ಯವನ್ನು ವಿವರಿಸುವುದು ಅಸಾಧ್ಯ 4
2. ಇಷ್ಟೂ ನಾರಿಯರ ಪ್ರಕಾರ ಆಕೆಯ ತಮ್ಮನೇ 'ಶ್ರೇಷ್ಠ ಮನುಷ್ಯ' 4
3. ಕಾಳರಾತ್ರಿಯಲ್ಲಿ ನಡೆದ ಕೃತ್ಯ, ಎಷ್ಟು ಭಯಂಕರ! 3
5. ಸುಳ್ಳು ಕವಚಗಳನ್ನು ಮಾರಲು ಬಂದು ತಲೆಕೆಳಕಾದ ಮೋಸಗಾರ 3
6. ಬಂಧಿತರು ಕೈಗೊಂಡ ಹರತಾಳ ಈಗ ನಿಯಂತ್ರಣಕ್ಕೆ ಬಂದಿದೆ 4
8. ತುಂಗಾ ತೀರದಲ್ಲಿ ಅಭ್ಯಾಸಕ್ಕೆ ಸೇರುವ ವಿದ್ಯಾರ್ಥಿಗಳದು ಯಾವ ದರ್ಜೆ? 4
10. ಕೆಂಡದ ಮೇಲೆ ನಡೆಯುವುದನ್ನು ಊಹಿಸಿಕೊಂಡರೇ ಗಡಗಡ 3
11. ಕರ್ತಾರನದೇ ಸೃಷ್ಟಿಯಾದ ಅಮೂಲ್ಯ ಮಣಿಗಳ ಆಕರವೆಂದರೆ ಸಾಗರವೇ ತಾನೇ? 4
12. ಪ್ರಸ್ತುತ ಸಂಗತಿಗೆ ಆತನ ಮಾತುಗಳು ಹೊಂದುವುದಿಲ್ಲ 4
13. ಕೇಡು ಮಾಡಿಸಲು ಹೊರಟಿದ್ದಕ್ಕೆ ಸಿಕ್ಕಿದ್ದು ಈ ಮಣ್ಣಿನ ಪಾತ್ರೆ 3

---

### 27—05—2021 ಉತ್ತರಗಳು

ಎಡದಿಂದ ಬಲಕ್ಕೆ:

1. ದುಮ್ಮಾನ 3. ತವರು 4. ಸೀಮಿತ 6. ಪರಿಣಯ 7. ಮಹನೀಯ 9. ಕಟುನುಡಿ 11. ಸವಿಗಾನ 15. ಪುರಾವೆ 16. ತಲ್ಲೀನ 17. ತವಕ

ಮೇಲಿಂದ ಕೆಳಕ್ಕೆ:

1. ದುರುಳ 2. ನಸೀಬು 3. ತರುಣ 5. ತರಹ 6. ಪದಕ 8. ಯವನ 10. ನುಣುಪು 12. ವಿಪಿನ 13. ಸವೆತ 14. ಸೂತಕ

ಪ್ರಶ್ನಾಂಕಣ

## ಮಾನವ ನಿರ್ಮಿತಿ- ಮತ್ತೊಂದು (ಕು)ಖ್ಯಾತಿ?

ಧರೆಯಲ್ಲಿ ಈವರೆಗೆ ಗುರುತಿಸಲಾಗಿರುವ ಜೀವಿ ಪ್ರಭೇದಗಳ ಸಂಖ್ಯೆ 19 ಲಕ್ಷ. ಅದರಲ್ಲಿ ಮಾನವರದು ಏಕೈಕ ಪ್ರಭೇದ. ಆದರೂ ಪೃಥ್ವಿಯ ಮೇಲೆ, ಇಲ್ಲಿನ ಜೀವಜಾಲದ ಮೇಲೆ ಮಾನವರ ಪ್ರಭಾವ ಮತ್ತು ದಬ್ಬಾಳಿಕೆಗಳ ದಾಖಲೆಗಳು ಹೇರಳ; ಅವೆಲ್ಲದರ ಪರಿಣಾಮಗಳು ಸ್ಪಷ್ಟ ಗೋಚರ.

ಧರೆಯಲ್ಲಿ ಮಾನವರ ಚಟುವಟಿಕೆಗಳ ಒಂದು ಹೊಸ 'ಸಾಧನೆ' ಅತ್ಯಂತ ಇತ್ತೀಚೆಗೆ ಕೈಗೂಡಿದೆ. ಕಳೆದ ವರ್ಷದ ಅಂತ್ಯದ ಸುಮಾರಿಗೆ ಧರೆಯಲ್ಲಿರುವ ಸಕಲ ಮಾನವ ಸೃಷ್ಟಿಗಳ (ಎಂದರೆ, ಕಟ್ಟಡಗಳು, ರಸ್ತೆಗಳು, ಸೇತುವೆಗಳು, ಯಂತ್ರಗಳು, ವಾಹನಗಳು, ಲೋಹೀಯ ವಸ್ತುಗಳು, ಪ್ಲಾಸ್ಟಿಕ್, ಬಟ್ಟೆ... ಇತ್ಯಾದಿ ಸರ್ವವಿಧ ಮಾನವ ತಯಾರಿಗಳು; ಚಿತ್ರ 3 ಮತ್ತು 4 ನೋಡಿ) ಒಟ್ಟು ದ್ರವ್ಯರಾಶಿ ಪ್ರಸ್ತುತ ಬದುಕಿರುವ ಸಕಲ ಜೀವಿಗಳ ಶರೀರದ ದ್ರವ್ಯರಾಶಿಯನ್ನು (ಎಂದರೆ, ಎಲ್ಲ ಸಸ್ಯಗಳ, ಮನುಷ್ಯರೂ ಸೇರಿದಂತೆ ಎಲ್ಲ ಪ್ರಾಣಿಗಳ ಒಟ್ಟೂ ದ್ರವ್ಯರಾಶಿ; ಚಿತ್ರ 1 ಮತ್ತು 2 ನೋಡಿ) ಮೀರಿಸಿದ್ದಾಯಿತು! ನಿರ್ದಿಷ್ಟವಾಗಿ ಹೇಳಬೇಕೆಂದರೆ, ಈಗ ಧರೆಯಲ್ಲಿರುವ ಎಲ್ಲ ಮಾನವ ನಿರ್ಮಿತಿಗಳ ಒಟ್ಟು ದ್ರವ್ಯ ರಾಶಿ 1.1 ಟ್ರಿಲಿಯನ್ ಟನ್ (1 ಟ್ರಿಲಿಯನ್ = 1 ಲಕ್ಷ ಕೋಟಿ). ಆದರೆ ಈಗ ಜೀವಿಸುತ್ತಿರುವ ಎಲ್ಲ ಸಸ್ಯ ಮತ್ತು ಪ್ರಾಣಿಗಳ ದ್ರವ್ಯರಾಶಿ ಇದಕ್ಕಿಂತ ಕಡಿಮೆ! ಪ್ರಕೃತಿಯನ್ನೇ ಮೀರಿಸಿದ ಈ ಮಾನವ ಕೃತ್ಯವನ್ನು 'ಸಾಧನೆ' ಎನ್ನಬಹುದೇ?

ಅದನ್ನು ನೀವು ಏನಾದರೂ ಅನ್ನಿ. ವಿಸ್ಮಯ ಏನೆಂದರೆ, ಇಸವಿ 1900ರಲ್ಲಿ, ಎಂದರೆ ಈಗ್ಗೆ 120 ವರ್ಷಗಳ ಹಿಂದೆ, ಆಗ ಇದ್ದ ಎಲ್ಲ ಮಾನವ ನಿರ್ಮಿತಿಗಳ ದ್ರವ್ಯರಾಶಿ ಆಗಿನದೇ 'ಜೈವಿಕ ರಾಶಿ'ಯ ಕೇವಲ ಶೇಕಡ 3 ರಷ್ಟಿತ್ತು! ಆಗಿನಿಂದ ಪ್ರತಿ 20 ವರ್ಷಗಳಿಗೊಮ್ಮೆ ಇಮ್ಮಡಿಗೊಳ್ಳುತ್ತ ಬಂದ ಮಾನವ ನಿರ್ಮಿತಿಗಳ ದ್ರವ್ಯರಾಶಿ ಪ್ರಸ್ತುತ ಇಡೀ ಜೈವಿಕ ರಾಶಿಯ ಮೊತ್ತಕ್ಕಿಂತ ಹೆಚ್ಚಾಗಿದೆ! ಈಗಂತೂ ಪ್ರತಿವಾರವೂ ಮಾನವರಿಂದ ತಯಾರಾಗುವ ವಸ್ತುಗಳ ದ್ರವ್ಯರಾಶಿ ಧರೆಯ ಇಡೀ ಜನಸಂಖ್ಯೆಯ (7.7 ಶತಕೋಟಿ) ದ್ರವ್ಯರಾಶಿಯನ್ನೇ ಮೀರುತ್ತಿದೆ!



ಮಾನವ ಸೃಷ್ಟಿಗಳ ಒಟ್ಟು ದ್ರವ್ಯರಾಶಿಯಲ್ಲಿ ಕಾಂಕ್ರೀಟ್‌ನದು ಶೇಕಡ 50 ಭಾಗ; ಇಟ್ಟಿಗೆ, ಲೋಹೀಯ ವಸ್ತುಗಳು ಮತ್ತು ಪ್ಲಾಸ್ಟಿಕ್‌ಗಳದು ಶೇಕಡ 19 ಭಾಗ; ಉಳಿದೆಲ್ಲ ವಸ್ತುಗಳದು ಶೇಕಡ 31 ಅಂಶ. ಸೋಜಿಗ ಏನೆಂದರೆ, ಪ್ಲಾಸ್ಟಿಕ್ಗಳ ಒಟ್ಟು ದ್ರವ್ಯರಾಶಿ ಧರೆಯ ಎಲ್ಲ ಪ್ರಾಣಿಗಳ (ನಾವೂ ಸೇರಿದಂತೆ ನೆಲಾವಾರ ಮತ್ತು ಜಲಾವಾರಗಳ ಎಲ್ಲ ಪ್ರಾಣಿಗಳು) ಶರೀರ ದ್ರವ್ಯರಾಶಿಯ ಎರಡುಪಟ್ಟು ಆಗುವಷ್ಟಿದೆ!

ಈ ಲೆಕ್ಕಾಚಾರಗಳಲ್ಲಿ ಮಾನವ ಸೃಷ್ಟಿಗಳಲ್ಲಿ ಕಾಲದಿಂದ ಕಾಲಕ್ಕೆ ತ್ಯಾಜ್ಯಗೊಳ್ಳುವ 'ಬಿಸಾಕು ವಸ್ತು'ಗಳು ಸೇರಿಲ್ಲ. ಅದನ್ನೂ ಪರಿಗಣಿಸಿದರೆ ನಿಸರ್ಗವನ್ನು ಮೀರಿಸಿದ ಈ 'ಮಹಾ ಸಾಧನೆ' ಇಸವಿ 2013ರಲ್ಲೇ ನೆರವೇರಿದ್ದಾಗಿದೆ!

■ ಎನ್. ವಾಸುದೇವ್